ಬೆಳಕರಿಯುವ ಮುಂಚೆಯೇ ಮೇಲೆದ್ದು ದನಗಳನ್ನು ಹೊರಗೆ ಕಟ್ಟಿ ಬಿರ ಬಿರನೆ ಕಸ ಗುಡಿಸಿ ತಿಪ್ಪೆಗೆ ಹೊತ್ತಾಕಿ ಬಂದ. ಹಿತ್ತಲಿಗೆ ಹೋಗಿ ಕೊಣಬೆಯಿಂದ ಹುಲ್ಲನ್ನು ಹಿರಿದು ಹೊರೆ ಮಾಡಿ ಹೊತ್ತುಕೊಂಡು ಬಂದು ಕೊಟ್ಟಿಗೆಗೆ ಹಾಕಿದ.

ಆಗ ತಾನೆ ಎದ್ದು ಮನೆಯಿಂದ ಹೊರಬಂದ ಬ್ರಾಹ್ಮಣ ಯುವಕನಿಗೆ ನೀವು ಹೇಳಿದ ಕೆಲಸ ಮಾಡಲು ಹೋಗುತ್ತಿರುವುದಾಗಿ ಹೇಳಿ ಗುಡಿಸಲಿಗೆ ಬಂದವನು, ಗಂಗಳದ ಅಂಚಿಗೆ ಪದ್ಧತಿಯಂತೆ ಎರಡು ಚಿಟಿಕೆಯಷ್ಟು ಉಪ್ಪು ಹಾಕಿ, ಕುಡುಗೋಲನ್ನು ಅದರ ಪಕ್ಕ ಇಟ್ಟು, ಮಂಕರಿಯೊಳಗೆ ಕೈ ತೂರಿಸಿ ಕೋಳಿಯನ್ನು ಹೊರಗೆಳೆದುಕೊಂಡ. ಅದು ಜೋರಾಗಿ ಕೊಕ್ಕುಡತೊಡಗಿತು. ಹೆಂಡತಿ ಹಸಿರಿಯನ್ನು ಕರೆದು ಅದರ ಕಾಲು, ರೆಕ್ಕೆ ಗಳನ್ನು ಹಿಡಿದುಕೊಳ್ಳುವಂತೆ ಹೇಳಿ ತಾನು ಅದರ ತಲೆ ಹಿಡಿದುಕೊಂಡು ಕುತ್ತಿಗೆಯಲ್ಲಿ ಸ್ವಲ್ಪ ಪುಕ್ಕ ಕಿತ್ತು ಕುಡುಗೋಲಿನಿಂದ ಕುಯ್ದು. ಸೋರುತ್ತಿದ್ದ ರಕ್ತಕ್ಕೆ ತಟ್ಟೆಯನ್ನು ಅಡ್ಡ ಹಿಡಿದ.

ಸ್ವಲ್ಪ ಹೊತ್ತು ಹಸಿರಿಯ ಬಿಗಿ ಮುಷ್ಠಿಯಲ್ಲಿ ಒದರಾಡಿ ನಿಶ್ಚಲವಾದ ಕೋಳಿಯ ರೆಕ್ಕೆ ಪುಕ್ಕಗಳನ್ನು ತರಿದು,ಬೆತ್ತಲಾದ ಕೋಳಿಯನ್ನು ಪುಳ್ಳೆಗೆ ಬೆಂಕಿ ಹಚ್ಚಿ ಸುಟ್ಟು ನೀರಿನಲ್ಲಿ ತೊಳೆದ. ಕುಡುಗೋಲಿನಿಂದ ಅದನ್ನು ಎರಡು ಭಾಗ ಮಾಡಿ, ಅಡೆ ತುಂಡಿನ ಮೇಲಿಟ್ಟುಕೊಂಡು ಮಚ್ಚಿನಿಂದ ತುಂಡುಗಳನ್ನಾಗಿ ಮಾಡಿ ಸಾರು ಮಾಡುವ ಮಡಕೆಗೆ ಹಾಕಿದ. ಹಸಿರಿ ಒಳಕಲ್ಲಿನಲ್ಲಿ ಕಾರ ರುಬ್ಬತೊಡಗಿದಳು. ಬೆಂದ ನಂತರ ಕೋಳಿ ಮಾಂಸದ ಅರ್ಧದಷ್ಟನ್ನು ಮೂಳೆಯಿಂದ ಬೇರ್ಪಡಿಸಿ ತರುವಂತೆ ಹಸಿರಿಗೆ ಹಾಗೂ ಗೊದ್ಲೆಯನ್ನು ಕರ್‍ಕಂಡೇ ಬರಬೇಕೆಂದು ಮಕ್ಕಳಿಗೆ ಹೇಳಿ, ಪುನಃ ಕೊಟ್ಟಿಗೆಗೆ ಬಂದು ದನಗಳನ್ನು ಹೊಡೆದುಕೊಂಡು ಸುಬ್ಬರಾಯರ ತೆಂಗಿನ ತೋಟದ ಕಡೆ ಹೊರಟ.

ಸ್ವಲ್ಪ ಹೊತ್ತಿಗೆ ತನ್ನ ಮಕ್ಕಳೊಂದಿಗೆ ಗೊದ್ಲೆ ಬಂದಾಗ ಬೋಗಯ್ಯನಿಗೆ ಖುಷಿಯಾಯಿತು. ಅವರು ಮಣ್ಣಿನ ರಸ್ತೆಯಲ್ಲಿ ಗೋಲಿಯಾಡ ತೊಡಗಿದರು.

ಸೂರ್ಯ ನೆತ್ತಿಯ ಮೇಲೆ ಬಂದಾಗ ಹಸಿರಿ ಕುಕ್ಕೆಯಲ್ಲಿ ಊಟ ಹೊತ್ತುಕೊಂಡು ಸೊಂಟದಲ್ಲಿ ನೀರು ತುಂಬಿದ ಗಡಿಗೆಯನ್ನು ಇರುಕಿಕೊಂಡು ಬಂದಳು.

ಆಟವಾಡುತ್ತಿದ್ದ ಹುಡುಗರನ್ನು ಊಟ ಮಾಡಲು ಕರೆದ ಬೋಗಯ್ಯ. ಗೊದ್ಲೆ ತಾನು ಉಣ್ಣಲು ಹಟ್ಟಿಗೆ ಹೋಗುವುದಾಗಿ ಹೇಳಿದಾಗ, ಅವನನ್ನು ಹೋಗಲು ಬಿಡದೆ ಬಲವಂತ ಮಾಡಿ ಕೂರಿಸಿದ. ಎಲ್ಲರೂ ಕೈ ತೊಳೆದುಕೊಂಡರು.

ಹಸಿರಿ ಗಂಗಳಕ್ಕೆ ಮುದ್ದೆ ಇಕ್ಕಿ, ಸಾರಿನ ಜೊತೆಗೆ ಮೂಳೆ ರಹಿತ ಕೋಳಿ ಮಾಂಸದ ತುಂಡುಗಳನ್ನು ಬಡಿಸಿದಾಗ ಗೊದ್ಲೆ 'ಇದೇನಿದು?' ಎಂದು ಕೇಳಿದ.

'ಅದು ಹಲಸಿನ ಬಡ್ಕು' ಎಂದ ಬೋಗಯ್ಯ. ಎಂದೂ ಹಲಸಿನ ಬಡಕಿನ ಸಾರು ಉಣ್ಣದ ಗೊದ್ಲೆ ಮುದ್ದೆಯನ್ನು ಮುರಿದು ಗುಕ್ಕು ಮಾಡಿ ಸಾರಿನಲ್ಲಿ ಹೊರಳಾಡಿಸಿ ನುಂಗಿ, ಮಾಂಸದ ತುಂಡನ್ನು ತಿನ್ನ ತೊಡಗಿದ.

ಊಟವಾದ ನಂತರ ಎಲ್ಲರೂ ಕೈ ತೊಳೆದು ಕೊಳ್ಳುತ್ತಿದ್ದರು. ಅಲ್ಲಿಯ ತನಕ ತೆಂಗಿನ ಮರದ ಮರೆಯಲ್ಲಿ ಅಡಗಿ ಇಣುಕಿ ನೋಡುತ್ತಾ ನಿಂತಿದ್ದ ತುಂಟ ಬ್ರಾಹ್ಮಣ ಯುವಕ ಹೊರಬಂದು ಗೊದ್ಲೆಯ ಎದುರು ಕುಕ್ಕರಗಾಲಿನಲ್ಲಿ ಕುಳಿತ. ತನ್ನ ಎಡಭಾಗದ ತುಟಿಗಳನ್ನು ಕೊಂಕಿಸಿ, ಜೂಜಿನಾಟದಲ್ಲಿ ಪಾಂಡವರನ್ನು ಮೋಸದಿಂದ ಸೋಲಿಸಿದ ಶಕುನಿಯ ಕುತಂತ್ರದ ನಗೆನಕ್ಕು ಕೇಳಿದ.

'ಗೊದ್ಲೆ ನೀನೀಗ ತಿಂದಿದ್ದು ಏನು ಹೇಳು?'

'ಹಲಸಿನ ಬಡಕು'.

'ಅದು ಹಲಸಿನ ಬಡುಕಲ್ಲ, ಕೋಳಿ ಮಾಂಸ'.

'ಇಲ್ಲ ಸುಳ್ಳು'.

'ಹುಡುಗರೆ, ನೀವು ಗೊದ್ಲೆ ತಿಂದಿದ್ದು ಏನು?'

'ಕೋಳಿ ಮಾಂಸ'.

'ಗೊತ್ತಾಯ್ತು ಈಗ. ನೀನು ಮಾಂಸ ತಿಂದಿರೋದ್ರಿಂದ ಜನಿವಾರ ಹಾಕ್ಕಳಂಗಿಲ್ಲ' ಎಂದ ಯುವಕ.

ಗೊದ್ಲೆಗೆ ಬಿಸಿಲಿನ ಝಳ ಒಮ್ಮೆಲೇ ನೂರ್ಮಡಿಗೊಂಡು ತಾನು ಅಗ್ನಿಕುಂಡದಲ್ಲಿರುವಂತೆ ಭಾಸವಾಯಿತು. ಬ್ರಾಹ್ಮಣ ಯುವಕ, ಬೋಗಯ್ಯ, ಹಸಿರಿ ಮತ್ತವರ ಮಕ್ಕಳು ಸ್ಮಶಾನದಲ್ಲಿ ಕೇಕೆ ಹಾಕಿಕೊಂಡು ನಗುವ ಪ್ರೇತಗಳಂತೆ ಕಂಡರು.

ಅವನ ಕಣ್ಣು ಗುಡ್ಡೆಗಳು ಮೇಲ್ಮುಖವಾದವು. ತನ್ನ ಬಲ ಹಸ್ತವನ್ನು ಹೃದಯದ ಮೇಲಿರಿಸಿ ಒಮ್ಮೆ 'ಹಾಂ' ಎಂದು ಹಾಗೇ ನೆಲಕ್ಕುರುಳಿದವನು ಮತ್ತೆ ಮೇಲಕ್ಕೇಳಲೇ ಇಲ್ಲ.

●